	ತಿಂಗಳು	ರಸ್ತೆ ಅಪಘಾತಗಳು	ಸತ್ತವರು	ಗಾಯಗೊಂಡವರು
ಅ)	ಆಗಸ್ಟ್ 1990	563	46	495
	ಸೆಪ್ಟೆಂಬರ್ 1990	552	44	437
	ಅಕ್ಟೋಬರ್ 1990	504	51	361
ಆ)	ಆಗಸ್ಟ್ 1990	26	13	66
	ಸೆಪ್ಟೆಂಬರ್ 1990	25	12	24
	ಅಕ್ಟೋಬರ್ 1990	19	9	30

ಪೋಲೀಸ್ ಠಾಣೆ ಬಗ್ಗೆ

433. ಶ್ರೀ ಅಂಜನಮೂರ್ತಿ (ನೆಲಮಂಗಲ):– ಮಾನ್ಯ ಗೃಹ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಪಟ್ಟಣದಲ್ಲಿ ಪ್ರತ್ಯೇಕ ಆರಕ್ಷಕ ಠಾಣೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಆರಕ್ಷಕ ಠಾಣೆಯನ್ನು ತೆರೆಯುವಂತೆ ಸ್ಥಳೀಕರಿಂದ ಸರ್ಕಾರಕ್ಕೆ ಮನವಿಯೇನಾದರೂ ಬಂದಿದೆಯೇ, ಹಾಗಿದ್ದಲ್ಲಿ, ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ (ಗೃಹ ಸಚಿವರು):–

ಅ) ಹೌದು.

ಆ) ಯಾವುದೇ ಮನವಿ ಬಂದಿರುವುದಿಲ್ಲ.

ಹೆದ್ದಾರಿಗಳಲ್ಲಿ ನಾಮಫಲಕಗಳ ಬಗ್ಗೆ

437. ಶ್ರೀ ಅಂಜನಮೂರ್ತಿ (ನೆಲಮಂಗಲ):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಗ್ರಾಮಾಂತರ ದಾರಿಗಳಲ್ಲಿ ಗ್ರಾಮಗಳ ಹೆಸರುಗಳನ್ನು ಸೂಚಿಸುವ ನಾಮಫಲಕಗಳು ಅನೇಕ ಕಡೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದಾಗಿ, ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸದರಿ ನಾಮಫಲಕಗಳನ್ನು ಹಾಕಿಸಲು ಸರ್ಕಾರದವರು ತುರ್ತು ಕ್ರಮ ಕೈಗೊಳ್ಳುವರೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):–

ಅ) ರಾಜ್ಯದಲ್ಲಿರುವ ರಸ್ತೆಗಳ ದಾರಿಯಲ್ಲಿ ಬರುವ ಗ್ರಾಮಗಳ ಹೆಸರು ಸೂಚಿಸುವ ನಾಮಫಲಕಗಳು ಕೆಲವು ಕಡೆ ಇಲ್ಲದಿರುವುದು ಗಮನಕ್ಕೆ ಬಂದಿದೆ.

ಆ) ಈ ಬಗ್ಗೆ ನಾಮಫಲಕಗಳಿಲ್ಲದಿರುವ ಕಡೆ ಜರೂರಾಗಿ ನಾಮಫಲಕಗಳನ್ನು ಹಾಕುವಂತೆ ಸಂಬಂಧಪಟ್ಟ ಎಲ್ಲಾ ಮುಖ್ಯ ಇಂಜಿನಿಯರ್‌ಗಳಿಗೆ ಸೂಚನೆಯನ್ನು ನೀಡಲಾಗಿದೆ.

ಪಶುವೈದ್ಯ ಕಾಲೇಜುಗಳ ಸಂಖ್ಯೆ ಬಗ್ಗೆ

428. ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ):– ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುವೈದ್ಯ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?